
# ಭಯದಿಂದ ನಷ್ಟ



ಒಬ್ಬ ಬಡವನಿದ್ದ. ಅವನು ಒಂದು ದಿನ ದಾರಿಯಲ್ಲಿ ಹೋಗುತ್ತಿದ್ದಾಗ ಅವನಿಗೆ ಒಂದು ಪೆಟ್ಟಿಗೆ ಕಾಣಿಸಿತು. ಅದಕ್ಕೆ ಬೀಗ ಹಾಕಿತ್ತು. ಬಡವ ಅದರ ತುಂಬ ಹಣ ಅಥವಾ ಬೆಲೆಬಾಳುವ ವಸ್ತುಗಳು ಇರಬಹುದೆಂದು ಊಹಿಸಿದ. ಇದರಿಂದ ತನ್ನ ಬಡತನ ನೀಗಬಹುದೆಂದು ಭಾವಿಸಿದ.

ಪೆಟ್ಟಿಗೆಯನ್ನು ಮನೆಗೆ ತೆಗೆದುಕೊಂಡು ಹೋದನು. ಅವನ ಪತ್ನಿ ಪುತ್ರರೆಲ್ಲ ಅವನ ಸುತ್ತ ನೆರೆದರು. ಅವನು ಏನೋ ದೊಡ್ಡ ಆಸ್ತಿ ತಂದಿದ್ದಾನೆ ಎಂದು ಎಲ್ಲರಿಗೂ ಕುತೂಹಲ. ಬಡವನು ಸುತ್ತಿಗೆಯನ್ನು ತಂದನು. ಎಲ್ಲರೂ ಆಸಕ್ತಿಯಿಂದ ನೋಡುತ್ತಿದ್ದಾರೆ. ಪತ್ನಿ ಏನೇನೊ ಸುಖಸ್ವಪ್ನಗಳನ್ನು ಕಾಣುತ್ತಿದ್ದಾಳೆ.

ಒಂದೇ ಹೊಡೆತಕ್ಕೆ ಬೀಗವನ್ನು ಮುರಿದನು ಬಡವ. ನಿಧಾನವಾಗಿ ಬಾಗಿಲನ್ನು ತೆರೆದನು. ಇದ್ದಕ್ಕಿದ್ದಂತೆಯೇ ಬುಸ್ ಎಂದು ಶಬ್ದವಾಯಿತು. ಹೆಂಡತಿ ಮಕ್ಕಳು ಎಲ್ಲ ಕಿರುಚಿದರು. ಪೆಟ್ಟಿಗೆಯಿಂದ ಒಂದು ಹಾವು ಹೆಡೆ ಎತ್ತಿ ನಿಂತಿತು.

ಎಲ್ಲರೂ ಭಯದಿಂದ ಮನೆಯಿಂದ ಹೊರಗೆ ಓಡಿದರು. ಬಡವನು ಒಂದು ದೊಡ್ಡ ದೊಣ್ಣೆಯನ್ನು ತೆಗೆದುಕೊಂಡು ಮನೆಯ ಒಳಗೆ ಪ್ರವೇಶಿಸಿದನು. ಹಾವನ್ನು ಕೊಲ್ಲಬೇಕೆಂಬುದು ಅವನ ಉದ್ದೇಶವಾಗಿತ್ತು.

ಒಳಗೆ ಹೋಗಿ ನೋಡಿದಾಗ ಹಾವು ಪೆಟ್ಟಿಗೆಯೊಳಗೆ ಸುರುಳಿಸುತ್ತಿಕೊಂಡು ಮಲಗಿತ್ತು. ಬಡವನು ಮೆತ್ತಗೆ ಬಾಗಿಲು ಮುಚ್ಚಿದನು. ಒಂದು ಕೊಂಡಿಯನ್ನು ಸಿಕ್ಕಿಸಿ ಹಾವು ಬಾಗಿಲನ್ನು ತೆಗೆದು ಹೊರಬರದಂತೆ ಮಾಡಿದನು.

ಈಗ ಪೆಟ್ಟಿಗೆಯನ್ನು ಏನು ಮಾಡುವುದು? ಅವನಿಗೆ ತನ್ನ ಪಕ್ಕದ ಮನೆಯವರನ್ನು ಕಂಡರೆ ಆಗುತ್ತಿರಲಿಲ್ಲ. ಏನಾದರೂ ಅವರಿಗೆ ಕಿರುಕುಳ ಕೊಡುತ್ತಿದ್ದ. ಅವನು ಈ ಪೆಟ್ಟಿಗೆಯನ್ನು ಅವರಿಗೆ ತಿಳಿಯದಂತೆ ಕದ್ದು ಅವರ ಮನೆಯಲ್ಲಿ ಇಟ್ಟುಬಂದನು.

ಆ ಮನೆಯ ಯಜಮಾನನು ಆ ಪೆಟ್ಟಿಗೆಯ ಬಾಗಿಲನ್ನು ತೆಗೆಯುತ್ತಿದ್ದಂತೆಯೇ ಹಾವು ಬುಸುಗುಟ್ಟುತ್ತ ಹೊರಗೆ ಬಂತು. ಅವನಿಗೆ ಹಾವನ್ನು ಮುಗ್ಧಗೊಳಿಸುವ ಮಂತ್ರ ಬರುತ್ತಿತ್ತು. ಕೂಡಲೆ ಅದನ್ನು ಪ್ರಯೋಗಿಸಿದನು. ಹಾವು ಮೆತ್ತಗೆ ಮಲಗಿಕೊಂಡು ಬಿಟ್ಟಿತು.

ಅವನು ಆ ಹಾವನ್ನು ತೆಗೆದುಕೊಂಡು ಹೋಗಿ ಕಾಡಿನಲ್ಲಿ ಬಿಟ್ಟನು. ಹಿಂತಿರುಗಿ ಬಂದು ಆ ಪೆಟ್ಟಿಗೆಯ ಒಳಗೆ ನೋಡಿದನು. ಆಶ್ಚರ್ಯ! ಅದರ ಕೆಳಭಾಗದಲ್ಲಿ ಅನೇಕ ಚಿನ್ನದ ನಾಣ್ಯಗಳಿದ್ದವು. ಅವನು ಅದರಿಂದ ದೊಡ್ಡ ಶ್ರೀಮಂತನಾದನು.

ಜೀವನದಲ್ಲಿ ಎಷ್ಟೊ ವಿಪತ್ತುಗಳು ಬರುತ್ತವೆ. ಆದರೆ ನಾವು ಭಯದಿಂದ ಹಿಂಜರಿದರೆ ಜೀವನದಲ್ಲಿ ಏನನ್ನೂ ಸಾಧಿಸಲಾಗುವುದಿಲ್ಲ. ಅದರಿಂದ ನಮಗೇ ನಷ್ಟ. ಜೀವನದ ಸವಾಲುಗಳನ್ನು ಧೈರ್ಯವಾಗಿ ಎದುರಿಸಬೇಕು. ಆಗ ನಾವು ಪ್ರಗತಿಯನ್ನು ಸಾಧಿಸಬಹುದು. ಇಲ್ಲದಿದ್ದರೆ ನಾವು ಇದ್ದಲ್ಲಿಯೆ ಇದ್ದು ಬಿಡುತ್ತೇವೆ.